ಹೊರಗಾದರೆ, ಸೀತಮ್ಮನಿಗೆ ದೇವರ ನೈವೇದ್ಯಕ್ಕೆ ಮಡಿ ಅಡುಗೆ ಮಾಡುವ ಕೆಲಸ ಕಿಂಚಿತ್ತೂ ಕಷ್ಟವಾಗುತ್ತಿರಲಿಲ್ಲ. ತರಕಾರಿ ಹೆಚ್ಚು, ಕಾಯಿ ತುರಿ, ಮೇಲೋಗರಕ್ಕೆ ಅರಿ, ಏನು ಬರುತ್ತಿರಲಿಲ್ಲ ವೆಂಕಟರಾಮುವಿಗೆ? ಅಂತಃಪುರದ ಹೆಂಗಸರಿಗೆ ತೀರಾ ಬೇಕಾದವನಾಗಿ, ಸದಾ ಮುಖದ ಮೇಲೊಂದು ನಗು ಅಂಟಿಸಿಕೊಂಡಿರುತ್ತಿದ್ದ ತಮ್ಮನನ್ನು ಕಂಡರೆ ಶಿವರಾಮನಿಗೆ ಯಾಕೆ ಅಸಮಾಧಾನ? ಅವನು ಎಲ್ಲರಿಗೂ ಪ್ರಿಯನಾಗಿರುವುದೇ ಇದರ ಮೂಲ ಕಾರಣವೇ? ಗೊತ್ತಾಗುತ್ತಿರಲಿಲ್ಲ ಸೀತಾಲಕ್ಷ್ಮಿಗೆ.

‘ಪಂಚೆ ಗಿಂಚೆ ಬಿಸಾಕಿ ಒಂದು ಸೀರೆ ಉಟ್ಗಂಬಿಡು. ಲಾಯ್ಕು ಒಪ್ಪುತ್ತೆ ನಿಂಗೆ...’ ಶಿವರಾಮ ಇಂತಹ ಮಾತಾಡಿದ್ದನ್ನೂ ಕೇಳಿಸಿಕೊಂಡಿದ್ದಾಳೆ ಸೀತಾಲಕ್ಷ್ಮಿ. ಮೈದುನನ ಕುರಿತು ‘ಅಯ್ಯೋ ಪಾಪ...’ ಅಂದುಕೊಂಡಿದ್ದಾಳೆ. ತಮಾಷೆ ಅಂದರೆ ಅಣ್ಣ ಸೀರೆಯುಡುವ ಮಾತು ಆಡಿದ್ದನ್ನು ಈ ತಮ್ಮ ಪರಿಪಾಲಿಸಿದ್ದಿದೆ. ಆ ಪ್ರಸಂಗ ನೆನೆಸಿಕೊಂಡಾಗಲೆಲ್ಲಾ ಸೀತಾಲಕ್ಷ್ಮಿಯ ತುಟಿಗಳ ಮೇಲೆ ನಗು ಬಿರಿಯುತ್ತದೆ.

ಮೂರು ಸಂಜೆ ಹೊತ್ತು. ಸೀತಾಲಕ್ಷ್ಮಿ ಕೊಟ್ಟಿಗೆಗೆ ಹೋಗಿ ಹಾಲು ಕರೆದುಕೊಂಡು, ಹಾಲಿನ ತಂಬಿಗೆಯನ್ನು ಸೆರಗಿನಲ್ಲಿ ಮುಚ್ಚಿಕೊಂಡು ಒಳಗೆ ಬಂದಿದ್ದಾಳೆ. ಅವತ್ತು ಶಿವರಾಮ ಮನೆಯಲ್ಲಿರಲಿಲ್ಲ. ಅಡಿಕೆ ಮಾರಾಟಕ್ಕೆ ಶಿವಮೊಗ್ಗಕ್ಕೆ ಹೋಗಿತ್ತು ಸವಾರಿ. ಮರುದಿನವೋ, ಆ ಮರುದಿನವೋ ಬರುವ ಅಂದಾಜು. ಕಮಲ ಯಥಾಪ್ರಕಾರ ಹಿತ್ತಲಿಗೆ ಹೋಗಿ ಮರುದಿನದ ಮೇಲೋಗರಕ್ಕೆ ಯಾವ ತರಕಾರಿ ಎನ್ನುವ ಲೆಕ್ಕಾಚಾರದಲ್ಲಿ ಕಳೆದುಹೋಗಿರುವ ಹೊತ್ತು. ಮನೆ ಎದುರಿನ ಹೂಗಿಡಗಳಿಗಾಗಲೀ, ಹಿತ್ತಲಿನ ತರಕಾರಿ ಮಡಿಗಳಿಗಾಗಲೀ, ಮಳೆಗಾಲ ಹೊರತುಪಡಿಸಿ ಉಳಿದಂತೆ ನೀರುಣಿಸುವುದು, ಕೊಟ್ಟಿಗೆ ಗೊಬ್ಬರ, ಬೂದಿ ಹಾಕಿ ಆರೈಕೆ ಮಾಡುವುದು ಅವಳ ಪ್ರೀತಿಯ ಉದ್ಯೋಗ. ಅವಳ ಮೇಲ್ವಿಚಾರಣೆಯಲ್ಲಿ ಗಿಡಗಳು ಸೊಕ್ಕಿ ಬೆಳೆದು ಪ್ರತಿಫಲ ನೀಡುತ್ತಿದ್ದುವು. ಗೌರಿಹಬ್ಬದ ಹೊತ್ತಿಗೆ ನೋಡಬೇಕು, ತಟ್ಟೆಯಷ್ಟಗಲದ ಬಣ್ಣ ಬಣ್ಣದ ಡೇರೆ ಹೂಗಳ ಸುಗ್ಗಿ. ಡೇರೆ ಹೂವುಗಳ ಜೊತೆ ಪೈಪೋಟಿ ಮಾಡುವಂತೆ ಗುಲಾಬಿ, ಕನಕಾಂಬರ, ನಿತ್ಯಪುಷ್ಪ, ನಂಜಬಟ್ಟಲು, ಕರವೀರ ಹೇಳುತ್ತಾ ಹೋದರೆ ಹನುಮಂತನ ಬಾಲ. ಹೆಡಿಗೆಗಟ್ಟಲೆ ಹೂವುಗಳ ಸೂರೆ. ಗೌರಮ್ಮ ಹೂವಿನರಾಶಿಯಲ್ಲಿ ಮುಚ್ಚಿ ಹೋಗಿರುತ್ತಿದ್ದಳು. ಮೊದಲ ವರ್ಷದ ಗೌರಿಹಬ್ಬಕ್ಕೆ ವಾಡಿಕೆಯಂತೆ ತೌರಿಗೆ ಹೋಗಬೇಕಿತ್ತು ಸೀತಾಲಕ್ಷ್ಮಿ. ಅಲ್ಲಿ ಒಂದು ಸೂತಕ ಬಂದು ಆ ಅವಕಾಶ ಕೈತಪ್ಪಿ ಹೋಗಿದ್ದರ ಕುರಿತು ಅವಳಿಗೆ ಎಷ್ಟು ಬೇಜಾರಾಗಿತ್ತು ಅಂದರೆ ಒರೆಸಿಕೊಂಡಷ್ಟೂ ಕಣ್ಣೀರು ದಳಗುಟ್ಟಿ ಇಳಿಯುತ್ತಿತ್ತು.

‘ಮಾರಾಯ್ತೀ, ವರ್ಷಾವಧಿ ಹಬ್ಬದ ಹೊತ್ತಿಗೆ ಕಣ್ಣೀರು ಕರೀಬೇಡ. ಮುಂದಿನೊರ್ಷ ತೌರುಮನೆಗೇ ಹೋಗು ಆಯ್ತಾ?’ ಸಮಾಧಾನಿಸಿದ್ದರು ವೆಂಕಮ್ಮ. ‘ಇಷ್ಟಕ್ಕೆಲ್ಲಾ ಅಳ್ತಾರಾ?’ ಎಂದು ವೆಂಕಟರಾಮು ಬಾಯಿ ಕಳೆದುಕೊಂಡು ನಿಂತಿದ್ದ. ಏಕಾಂಗಿಯಾಗಿ ಕೂತು ಗೌರಿಪೂಜೆ ಮಾಡಿದ್ದಳು ಸೀತಾಲಕ್ಷ್ಮಿ. ಅಜ್ಜನ ಕಾಲದ ಕೈ ಬರೆಹದ ವ್ರತದ ಪುಸ್ತಕ ಹಿಡಿದು ಪೂಜೆ ಮಾಡಿಸಿದ್ದು ವೆಂಕಟರಾಮು. ಸಂಸ್ಕೃತದ ಮಂತ್ರ ಕಬ್ಬಿಣದ ಕಡಲೆ ಆಗಿ ತಡವರಿಸುತ್ತಿದ್ದ ಪುಣ್ಯಾತ್ಮ. ಪೂಜೆ ಮಾಡಿಸುತ್ತಿರುವವನು ಆ ಉದ್ಯೋಗಕ್ಕೆ ಹೊಸಬ. ಪೂಜೆ ಮಾಡುತ್ತಿರುವವಳು ಹೊಸಬಳು. ಅವನು ತಡವರಿಸಿದಾಗಲೆಲ್ಲಾ ಬಾಯಿಗೆ ಸೆರಗು ಮುಚ್ಚಿಕೊಂಡು ಕಿಸಕಿಸ ನಗುತ್ತಿದ್ದಳು ಪೂಜೆಗೆ ಕೂತವಳು. ಅವನಿಗೆ ನಾಚಿಕೆಯಂತಾದ್ದೇನೋ ಕಾಡಿ ಮತ್ತಷ್ಟು ಉಗ್ಗುತ್ತಿದ್ದ. ಪೂಜೆ ಗೀಜೆ ಅಂದರೆ ಕಮಲ ಆ ಕಡೆ ಸುಳಿಯುತ್ತಿರಲಿಲ್ಲ. ವೆಂಕಮ್ಮ ಅಡುಗೆಮನೆಯಲ್ಲಿ ಕಳೆದುಹೋಗಿದ್ದರು. ಶಿವರಾಮ ಸ್ವತಃ ಪೂಜೆ ಮಾಡಿಸಬಹುದಿತ್ತು. ತಮ್ಮನ ಹಾಗೆ ತನಗೂ ಮಂತ್ರೋಚ್ಚಾರಣೆ ಕೈಕೊಟ್ಟು ಹೊಸ ಹೆಂಡತಿಯ ಎದುರು ನಾಚಿಕೆಗೇಡಾಗಬಾರದು ಎನ್ನುವ ಮುಂದಾಲೋಚನೆಯೂ ಇರಬಹುದು. ಮುಂದಾಲೋಚನೆಯಲ್ಲಿ, ಮುನ್ನೆಚ್ಚರಿಕೆ ವಹಿಸುವಲ್ಲಿ ಶಿವರಾಮನನ್ನು ಬಿಟ್ಟರಿಲ್ಲ. ಕ್ರಮೇಣ ಎಲ್ಲಾ ಗೊತ್ತಾಗುವುದರಲ್ಲಿತ್ತು ಸೀತಾಲಕ್ಷ್ಮಿಗೆ. ಅಡುಗೆಯ ಮಧ್ಯ ಆಗೀಗ ದೇವರಕೋಣೆಗೆ ಹಣಿಕಿ ಹಾಕಿ ಹೋಗುತ್ತಿದ್ದ ವೆಂಕಮ್ಮ ಒಂದೆರಡು ಸಲ ಗದರಿಸಿ ಹೋಗಿದ್ದರು. ‘ಪೂಜೆ ಮಾಡ್ಬೇಕಾರೆ ಭಕ್ತಿಯಿಂದ ಮಾಡ್ಬೇಕು. ಮುತ್ತೈದೆ ಸೌಭಾಗ್ಯ ಯಾವತ್ತೂ ಇರ್ಲಿ ಅಂತ ಬೇಡ್ಕಂಬೇಕು. ಸರಿಯಾಗಿದೀರಿ ಇಬ್ರೂ...’

ಮರುದಿನ ನಿರ್ಮಾಲ್ಯದ ಹೂಗಳನ್ನು ತೆಗೆಯುವಾಗ ಆ ರಾಶಿಯ ಜೊತೆ ಗೌರಿಗೆ ಏರಿಸಿದ್ದ ಚಿನ್ನದ ಸರವನ್ನೂ ಬಿಸಾಕಿ, ಮಲ್ಲಿಗೆ ಹಂಬಿನ ಬುಡದಲ್ಲಿ ನಿರ್ಮಾಲ್ಯದ ಜೊತೆ ಬಿದ್ದಿದ್ದ ಸರವನ್ನು ಕಂಡು ತಂದುಕೊಟ್ಟಿದ್ದು ಕಮಲಾ. ಶಿವರಾಮನ ಕಿವಿಯವರೆಗೆ ಈ ಸುದ್ದಿ ಹೋಗಬಾರದೆಂದು ಹೆಂಗಸರು ಕಣ್ಸನ್ನೆ ಮಾಡಿಕೊಂಡಿದ್ದರೂ ಅವನಿಗೆ ವಿಷಯ ಗೊತ್ತಾಗಿಬಿಟ್ಟಿತ್ತು.

‘ಮೈಮೇಲೆ ಪ್ರಜ್ಞೆ ಇಲ್ದಿದ್ರೆ ಹಿಂಗೇ ಆಗೋದು. ಕಮಲಕ್ಕನ ಕಣ್ಣಿಗೆ ಬಿತ್ತು, ಸರಿ. ಯಾರಾರೂ ಕೆಲಸದೋರು ನೋಡಿದ್ರೆ ಮೂರು ನಾಮ.’

‘ಹಿಂಗಾಯ್ತು ಅಂತ ಗೊತ್ತೇ ಆಗ್ಲಿಲ್ಲ. ಜವಾಬ್ದಾರಿ ಅನ್ನೋದು ಚೂರಾದ್ರೂ ಬ್ಯಾಡ್ವಾ?’

ಮಡಿ ಉಟ್ಟು ಗಣಪತಿ ವ್ರತಕ್ಕೆ ಕೂತವನ ವಾಗ್ಧಾರೆಯನ್ನು ತಡೆದಿದ್ದರು ವೆಂಕಮ್ಮ.

‘ಸಾಕೋ ಮಾರಾಯಾ. ದೇವ್ರನ್ನ ನೋಡ್ಕಂಡು ಪೂಜೆ ಮಾಡು. ಆಗುತ್ತಪ್ಪಾ ಪರಾಮೋಷಿ ಒಂದೊಂದ್ಸಲ...’

ಒಳಗೆ ಬಾಳೆಲೆಯ ಕಡುಬಿನ ಕೊಟ್ಟೆಗೆ ಹಿಟ್ಟು ತುಂಬಿ ಒಲೆಯ ಮೇಲಿದ್ದ ತಪ್ಪಲೆಯಲ್ಲಿ ಜೋಡಿಸುತ್ತಿದ್ದ ಸೀತಾಲಕ್ಷ್ಮಿ ಕಣ್ಣೀರು ತಡೆದುಕೊಂಡಿದ್ದಳು. ವರ್ಷಾವಧಿ ಹಬ್ಬದ ದಿನ ಅಳುವುದಾ? ಶ್ರೇಯಸ್ಸಲ್ಲ ಮನೆಗೆ. ವರ್ಷಾವಧಿ ಹಬ್ಬದ ದಿನ ಬೈಯಬಹುದಾ? ಬೈಯಬಹುದು. ಗಂಡಸಲ್ಲವಾ?

ಶಿವರಾಮ ಮನೆಯಲ್ಲಿಲ್ಲದಿದ್ದಾಗ ಆ ಮನೆಯಲ್ಲಿ ಎಲ್ಲರ ಗಂಟಲೂ ಜೋರಾಗುತ್ತದೆ. ಕಣ್ಣಿ ಬಿಚ್ಚಿದ ಎಳೆಗರುವಿನಂತಾಗುತ್ತಾನೆ ವೆಂಕಟರಾಮು. ಉಸಿರು ಬಿಗಿ ಹಿಡಿದುಕೊಂಡಂತಿದ್ದ ಎಲ್ಲರನ್ನೂ ನಗಿಸುವುದೇ ತನ್ನ ಧ್ಯೇಯವೇನೋ ಅನ್ನುವಂತೆ ಕೀಟಲೆಗೆ ಹೊಸ ಮಾರ್ಗಗಳನ್ನು ಹುಡುಕುತ್ತಾನೆ. ಮೂರು ಸಂಜೆಗೆ ಕೊಟ್ಟಿಗೆಯಿಂದ ಅವತ್ತು ಹಾಲು ಕರೆದುಕೊಂಡು ಒಳಗೆ ಬಂದಳಲ್ಲ ಸೀತಾಲಕ್ಷ್ಮಿ ತಂಬಾಲಿನ ಪಾತ್ರೆ ಒಳಗಿಟ್ಟು ಬಚ್ಚಲಿಗೆ ಹೋಗಿ ಕೈಕಾಲು ತೊಳೆದು ಬಂದಳು. ದೇವರ ಎದುರು ದೀಪ ಹಚ್ಚಿಡಬೇಕು. ಆಮೇಲೆ ವೆಂಕಟರಾಮನ ಸಂಧ್ಯಾವಂದನೆಯ ಶಾಸ್ತ್ರ ಮುಗಿಯಬೇಕು. ನಂತರ ಊಟದ ಕಲಾಪ. ವೆಂಕಮ್ಮ ಮರುದಿನ ಬೆಳಗಿನ ಕಾಫಿಗೆಂದು ಒಂದು ಕೌಳಿಗೆ ಹಾಲು ಬಗ್ಗಿಸಿ ಮುಚ್ಚಿಟ್ಟರು.

ಉಳಿದಿದ್ದನ್ನು ಇದ್ದಿಲೊಲೆಯ ಮೇಲೆ ಕಾಸಲು ಇಟ್ಟರು. ಹಾಲು ಅಷ್ಟು ಬೇಗ ಉಕ್ಕುವುದಿಲ್ಲವಾದರೂ ಮಾಡಲು ಬೇರೆ ಕೆಲಸ ಇಲ್ಲದ್ದರಿಂದ ಒಲೆ ಬದಿ ಗೋಡೆಗೊರಗಿ ಕೂತರು. ದೀಪ ಹಚ್ಚಿ ಬಂದ ಸೊಸೆ ಅಕ್ಕಿ ತೊಳೆದು ಎಸರಿಗೆ ಹಾಕುತ್ತಾಳೆ. ಊಟದ ಹೊತ್ತಿಗೆ ಹೂವರಳಿದಂತೆ ಹೊಗೆ ಹಾಯುವ ಬಿಸಿ ಅನ್ನ. ಸೆರಗಿಗೆ ಕೈ ವರೆಸಿಕೊಳ್ಳುತ್ತಾ ಸೀತಾಲಕ್ಷ್ಮಿ ದೇವರಕೋಣೆಗೆ ದಾಟುವಷ್ಟರಲ್ಲಿ,

‘ವೆಂಕೂ, ಏನ್ಮಾಡ್ತಿದೀಯೇ?’ ಎನ್ನುತ್ತಾ ಅವರಂತಹುದೇ ಮಡಿಸೀರೆಯ ಹೆಂಗಸು ಸೀದಾ ಅಡುಗೆಮನೆಗೆ ನುಗ್ಗಿತು. ಸೀತಾಲಕ್ಷ್ಮಿ ಯಾವತ್ತೂ ನೋಡಿರದ ಹೆಂಗಸು. ಮೊದಲೇ ಮಸುಕು ಬೆಳಕಿನ ಅಡುಗೆಮನೆಯಲ್ಲಿ ಕತ್ತಲು ಕವುಚಿಕೊಂಡಿದೆ. ಇನ್ನೂ ಚಿಮಣಿದೀಪ ಹಚ್ಚಿಟ್ಟಿಲ್ಲ. ಅನಿರೀಕ್ಷಿತವಾಗಿ ಕತ್ತಲ ಹೊತ್ತಿಗೆ ಆಗಮಿಸಿದ ಅತಿಥಿಯ ಗುರುತು ವೆಂಕಮ್ಮನಿಗೂ ಹತ್ತಲಿಲ್ಲ.

‘ಯಾರು?’ ಅಂದರು ಕೂತಲ್ಲಿಂದ ಮಂಡಿಯ ಮೇಲೆ ಕೈಯಿಟ್ಟುಕೊಂಡು ಏಳುತ್ತಾ.

‘ನನ್ನೇ ಯಾರು ಅಂತೀಯನೇ? ಕಣ್ಣು ನೆತ್ತಿಗೆ ಹೋಗೋದು ಅಂತ ಇದಕ್ಕೇ ಹೇಳೋದಲ್ವಾ? ಬಡೋರನ್ನ ಕಂಡ್ರೆ ಎಲ್ರಿಗೂ ಸಸಾರ. ಹೆಂಗೆ ಗುರುತು ಸಿಕ್ಕುತ್ತೆ ಹೇಳು...’ ಕೀರಲು ಕಂಠ ಕೇಳಿಯೇ ಹೊಳೆದುಬಿಟ್ಟಿತು ಸೀತಾಲಕ್ಷ್ಮಿಗೆ, ವೆಂಕಟರಾಮು ಅತ್ತೆಗೆ ಆಗಲೇ ಚಾಳೀಸು ಬಂದಿದೆ. ಕಣ್ಣು ಮಂಜು ಮಂಜು.

‘ದನಿ ಕೇಳಿದ್ರೆ ಅಂಬಕ್ಕ ಅನಿಸುತ್ತೆ. ಎಷ್ಟೊರ್ಷ ಆಯ್ತಲ್ಲೇ ನಿನ್ನ ನೋಡಿ. ನೆನಪು ಇರು ಅಂದ್ರೆ ಹೆಂಗಿರುತ್ತೆ?’

‘ಬರೀ ಮಾತಲ್ಲೇ ಮುಗಿಸ್ತೀಯಾ? ಕುಡಿಗಿಡಿಯೋಕೆ ಏನಾರೂ ಕೊಡೋ ಪಂಚಾತ್ಕೆ ಉಂಟಾ?’

‘ಕೂತ್ಗಳೆ ಮಾರಾಯ್ತೀ. ಅಪ್ರೂಪಕ್ಕೆ ಬಂದಿದೀಯಾ. ಈ ಸಲ ವಾರೊಪ್ಪತ್ತು ಇದ್ದು ಹೋಗ್ಬೇಕು ನೀನು...’

ಅತ್ತೆ ಹಾಲಿನ ಪಾತ್ರೆಯನ್ನು ಕೈಬಟ್ಟೆಯಿಂದ ಕೆಳಗಿಳಿಸಿ ಇನ್ನೊಂದು ಪಾತ್ರೆಗೆ ಒಲೆ ಬುಡದಲ್ಲಿದ್ದ ಕಾಫಿ ಬಗ್ಗಿಸಿ ಬಿಸಿಗಿಡುತ್ತಿದ್ದಂತೆ ಸೀತಾಲಕ್ಷ್ಮಿಯ ನಗು ಕಟ್ಟೆಯೊಡೆದುಕೊಂಡು ಹೊರಗೆ ನುಗ್ಗಿತು.